ಕರ್ನಾಟಕ ಸರ್ಕಾರ

ಕೃಷಿ ಇಲಾಖೆ

ಸಂ: ಗಯವಿ/ಕೆ–ಕಿಸಾನ್/PoC /2013–14

ಕೇಂದ್ರ ಕಚೇರಿ, ಶೇಷಾದ್ರಿ ರಸ್ತೆ
ಬೆಂಗಳೂರು – 560 001
ದಿನಾಂಕ: 03–04–2014

**ಸುತ್ತೋಲೆ**

ವಿಷಯ: ಕೆ–ಕಿಸಾನ್ ಯೋಜನೆಗೆ ಸಂಬಂಧಿಸಿದಂತೆ ಎನ್.ಐ.ಸಿ ರವರು ಸಿದ್ಧಪಡಿಸಿರುವ **software** ಅನ್ನು 176 ಕಸಬಾ ರೈತ ಸಂಪರ್ಕ ಕೇಂದ್ರಗಳಲ್ಲಿ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: ಸುತ್ತೋಲೆ ಸಂ: ಗಯವಿ/ಕೆ–ಕಿಸಾನ್/PoC /2013–14 ದಿನಾಂಕ 13–03–2014

*******

ಕೆ–ಕಿಸಾನ್ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸುತ್ತೋಲೆ ಅನ್ವಯ, ಈಗಾಗಲೇ NeGP-A ಯೋಜನೆಯಡಿ ಒದಗಿಸಲಾಗಿರುವ ಗಣಕಯಂತ್ರ ಹಾಗೂ ಪೂರಕ ಸಾಧನಗಳನ್ನು ಸಂಬಂಧಪಟ್ಟ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಿಂದ ಕಸಬಾ ರೈ.ಸಂ.ಕೇ ಗಳಿಗೆ ಸ್ಥಳಾಂತರಿಸಿ, ಸದರಿ ಗಣಕಯಂತ್ರಗಳಿಗೆ KSWAN ಸಂಪರ್ಕವನ್ನು ಒದಗಿಸಿಕೊಳ್ಳಲು ಸೂಚಿಸಲಾಗಿರುತ್ತದೆ.

ಮುಂದುವರೆದು, ಎನ್.ಐ.ಸಿ. ವತಿಯಿಂದ ಸಿದ್ಧಪಡಿಸಲಾಗಿರುವ ತಂತ್ರಾಂಶ (AISS Application software)ಅನ್ನು ಅಳವಡಿಸುವ ಹಾಗೂ ಅದನ್ನು ಉಪಯೋಗಿಸುವ ಕುರಿತು ಪ್ರತಿ ಜಿಲ್ಲೆಯಿಂದ ಒಬ್ಬ Master Trainer ಗೆ ದಿನಾಂಕ 29–03–2014 ರಂದು ಎನ್.ಐ.ಸಿ ಅಧಿಕಾರಿಗಳು ತರಬೇತಿಯನ್ನು ನೀಡಿರುತ್ತಾರೆ. ಆಯಾ ತಾಲ್ಲೂಕು ಕಸಬಾ ರೈತ ಸಂಪರ್ಕ ಕೇಂದ್ರಗಳಲ್ಲಿ AISS Application software ಅನ್ನು install ಮಾಡಲು, ಸದರಿ ತಂತ್ರಾಂಶವುಳ್ಳ CD ಅನ್ನು ಸಹಾ ನೀಡಲಾಗಿರುತ್ತದೆ.

ಈ ಹಿನ್ನಲೆಯಲ್ಲಿ, **ದಿನಾಂಕ 07–04–2014 ರಿಂದ ಕಡ್ಡಾಯವಾಗಿ ಎಲ್ಲಾ ಕಸಬಾ ರೈತ ಸಂಪರ್ಕ ಕೇಂದ್ರಗಳಲ್ಲಿ, ಕೃಷಿ ಪರಿಕರಗಳ ವಿತರಣೆಗೆ ಸಂಬಂಧಿಸಿದ ಎಲ್ಲಾ ವಹಿವಾಟುಗಳನ್ನು AISS Application software ಬಳಸಿಕೊಂಡು ನಿರ್ವಹಿಸಲು ಆದೇಶಿಸಿದೆ.** ಕೃಷಿ ಪರಿಕರಗಳ ವಿತರಣೆಗೆ ಸಂಬಂಧಿಸಿದಂತೆ ತಂತ್ರಾಂಶದಲ್ಲಿ generate ಆಗುವ Computerized bill ನ ಪ್ರತಿಯಲ್ಲಿ ಫಲಾನುಭವಿಯ ಸಹಿ ಪಡೆದು ಕಡತದಲ್ಲಿ ನಿರ್ವಹಿಸುವುದು. ಮುಂದುವರೆದು, ಕೃಷಿ ಪರಿಕರಗಳ ವಿತರಣೆಗೆ ಸಂಬಂಧಿಸಿದಂತೆ ಹಾಲಿ ನಿರ್ವಹಿಸುತ್ತಿರುವ ವಹಿಗಳ ಬದಲಾಗಿ, ತಂತ್ರಾಂಶದಲ್ಲಿ generate ಆಗುವ ವಿವಿಧ ವರದಿಗಳನ್ನು ಪ್ರತ್ಯೇಕ ಕಡತದಲ್ಲಿ ನಿರ್ವಹಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

3.4.14

ಕೃಷಿ ಆಯುಕ್ತರು

ಪ್ರತಿ:–

- ಕೃಷಿ ನಿರ್ದೇಶಕರು
- ಅಪರ ಕೃಷಿ ನಿರ್ದೇಶಕರು (ಮಾ.ಸಂ.ಅ, ಬೆ.ಅ. & ಯೋ, ಮತ್ತು ಸಾ.ಕೃ)
- ಜಂಟಿ ಕೃಷಿ ನಿರ್ದೇಶಕರು (ವಿಸ್ತರಣೆ ಮತ್ತು ತರಬೇತಿ, ಪರಿಕರ ಮತ್ತು ಅಭಿವೃದ್ಧಿ)
- ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ
- ಕೇಂದ್ರ ಕಛೇರಿಯ ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.